ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ:DPI-CPI0C7-2(OT)/11/2024-E-1451468 ದಿನಾಂಕ:24-07-2024

:: ಸು ತ್ತೋ ಲೆ ::

ವಿಷಯ: ಸ್ಥಳಾಂತರ ಮತ್ತು ಹಸ್ತಾಂತರಗೊಂಡ ಶಾಲೆಗಳಿಗೆ ಪರಿಷ್ಕೃತ ನೋಂದಣಿ ಆದೇಶ ಮತ್ತು ಪ್ರಥಮ ಮಾನ್ಯತೆ ನೀಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಕಡತ ಸಮ ಸಂಖ್ಯೆಯಲ್ಲಿ ಮಾನ್ಯ ಆಯುಕ್ತರ ಅನುಮೋದನೆ ಮೇರೆಗೆ.

*****

ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೆಲವೊಂದು ಖಾಸಗಿ ಶಾಲಾ ಆಡಳಿತ ಮಂಡಳಿಗಳು ಸರ್ಕಾರದ ಅನುಮತಿ ಪಡೆದು ಶಾಲೆಗಳನ್ನು ಮೂಲ ಸ್ಥಳಗಳಿಂದ ಬೇರೆ ಸ್ಥಳಗಳಿಗೆ ಸ್ಥಳಾಂತರ ಹಾಗೂ ಬೇರೆ ಆಡಳಿತ ಮಂಡಳಿಗೆ ಹಸ್ತಾಂತರ ಮಾಡಿಕೊಂಡಿರುತ್ತಾರೆ. ಸದರಿ ಸ್ಥಳಾಂತರ ಹಾಗೂ ಹಸ್ತಾಂತರಗೊಂಡ ಶಾಲೆಗಳಿಗೆ ಸರ್ಕಾರದ ಅನುಮತಿ ಆದೇಶದ ಪತ್ರದಂತೆ ಷರತ್ತುಗಳನ್ವಯ ಸಕ್ಷಮ ಪ್ರಾಧಿಕಾರಿಗಳಾದ ಉಪನಿರ್ದೇಶಕರು(ಆಡಳಿತ) ಇವರು ನಿಯಮಾನುಸಾರ ಆಡಳಿತಾತ್ಮಕ ಕ್ರಮಕೈಗೊಳ್ಳದೇ ಇರುವುದು ಗಮನಕ್ಕೆ ಬಂದಿರುತ್ತದೆ.

**ಪ್ರಯುಕ್ತ ಶಾಲೆಗಳ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಸಂಬಂಧಿಸಿದಂತೆ ಸರ್ಕರದಿಂದ ಅನುಮೋದನೆ ಪಡೆದ ಪ್ರಕರಣಗಳಲ್ಲಿ ಕಡ್ಡಾಯವಾಗಿ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.**

- ಸರ್ಕಾರದ ಸ್ಥಳಾಂತರ ಆದೇಶದ ಷರತ್ತು-1 ಮತ್ತು 2 ರಂತೆ ಹಾಗೂ ಸರ್ಕಾರದ ಹಸ್ತಾಂತರ ಆದೇಶದ ಷರತ್ತು-1,2 ಮತ್ತು 3 ರಂತೆ ಸದರಿ ಶಾಲೆಗಳು ಹೊಸ ಶಾಲೆಯೆಂದು ಮಾನ್ಯತೆ ಪಡೆಯುವ ಷರತ್ತುಗೊಳಪಟ್ಟು ಮಾನ್ಯತೆ ನೀಡುವುದು. ಹಾಗೂ ಸದರಿ ಶಾಲೆಗೆ ಹಿಂದಿನ ಸ್ಥಳದಲ್ಲಿರುವ ಶಾಲೆಯನ್ನು ಮುಚ್ಚುವ ಮತ್ತು ಹೊಸ ಸ್ಥಳದಲ್ಲಿ ಶಾಲೆ ತೆರೆಯುವುದಕ್ಕೆ ಸಂಬಂಧಿಸಿದಂತೆ ಒಂದೇ ಆದೇಶವನ್ನು ಹೊರಡಿಸತಕ್ಕದ್ದು ಹಾಗೂ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಹಿಂದಿನ ಆಡಳಿತ ಮಂಡಳಿಯು ಶಾಲೆಗಳನ್ನು ಬಿಟ್ಟುಕೊಡುವ ಹಾಗೂ ಹೊಸ ಆಡಳಿತ ಮಂಡಳಿಗೆ ಹಸ್ತಾಂತರಿಸುವುದಕ್ಕೆ ಸಂಬಂಧಿಸಿದಂತೆ ಆದೇಶವನ್ನು ಒಂದೇ ಆದೇಶದಲ್ಲಿ ಹೊರಡಿಸತಕ್ಕದ್ದು .
- ಸ್ಥಳಾಂತರ/ಹಸ್ತಾಂತರ ಆದೇಶ ಹೊರಡಿಸಿದ ದಿನಾಂಕದಿಂದ ಸದರಿ ಶಾಲೆಗಳನ್ನು ಕರ್ನಾಟಕ ಶಿಕ್ಷಣ ಕಾಯ್ದೆ-1983ರ ಅಡಿಯಲ್ಲಿ ರಚಿಸಲಾದ ನಿಯಮಗಳಂತೆ ಹೊಸ ಶಾಲೆಯೆಂದು ಪರಿಗಣಿಸಿ, ಹೊಸ ನೊಂದಣಿ ಸಂಖ್ಯೆಯೊಂದಿಗೆ ಸರ್ಕಾರದ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಪರಿಷ್ಕೃತ ನೊಂದಣಿ ಆದೇಶ ನೀಡುವುದು.
- ಸ್ಥಳಾಂತರ/ಹಸ್ತಾಂತರ ಆದೇಶ ಹೊರಡಿಸಿದ ದಿನಾಂಕದಿಂದ ಸದರಿ ಶಾಲೆಗಳಿಗೆ ಹೊಸ ಶಾಲೆಗೆ ಮಾನ್ಯತೆ ಕೋರುವಂತೆ ತಿಳಿಸಿ ಹೊಸದಾಗಿ ಪ್ರಸ್ತಾವನೆ ಪಡೆದು ಪ್ರಥಮ ಮಾನ್ಯತೆ ಮತ್ತು ನಂತರದ ವರ್ಷಗಳಲ್ಲಿ ಮಾನ್ಯತೆ ನವೀಕರಣ ನೀಡಲು ಕ್ರಮವಹಿಸುವುದು.
- ನೊಂದಣಿ ಮತ್ತು ಈಗಾಗಲೇ ಸದರಿ ಶಾಲೆಗಳಿಗೆ ನೀಡಿರುವ ಮಾನ್ಯತೆ ನವೀಕರಣವನ್ನು ಮಾರ್ಪಡಿಸಿ ಸ್ಥಳಾಂತರಿಸಿದ ಸ್ಥಳ/ವಿಳಾಸ ಮತ್ತು ಹಸ್ತಾಂತರಿಸಿದ ಆಡಳಿತ ಮಂಡಳಿಯ ವಿಳಾಸ ನಮೂದಿಸಿ ಪ್ರಥಮ ಮಾನ್ಯತೆ ಪ್ರಮಾಣ ಪತ್ರ ಮತ್ತು ನಂತರದ ಅವಧಿಗೆ ಮಾನ್ಯತೆ ನವೀಕರಣ ಪತ್ರ ನೀಡಲು ನಿಯಮಾನುಸಾರ ಕ್ರಮವಹಿಸುವಂತೆ ಸೂಚಿಸಿದೆ. ಸದರಿ ಪ್ರಕ್ರಿಯೆಯನ್ನು ವಿಳಂಬಕ್ಕೆ ಅವಕಾಶ ನೀಡದಂತೆ 15 ದಿನಗಳೊಳಗಾಗಿ ಪೂರ್ಣಗೊಳಿಸಿ ಈ ಕಚೇರಿಗೆ ವರದಿ ಸಲ್ಲಿಸುವುದು.

Scanned with OKEN Scanner

- ಮೇಲ್ಕಂಡ ಎಲ್ಲಾ ಪ್ರಕ್ರಿಯಗಳಲ್ಲಿ ಅನುಮೋದನೆ ನೀಡಿ ನೊಂದಣಿ ಪತ್ರ/ ಮಾನ್ಯತೆ ಪ್ರಮಾಣ ಪತ್ರ ನೀಡುವಾಗ ಕಡ್ಡಾಯವಾಗಿ ಶಾಲೆಯ ಪೂರ್ಣ ಅಂಚೆ ವಿಳಾಸ ಹಾಗೂ ಆಡಳಿತ ಮಂಡಳಿಯ ಪೂರ್ಣ ವಿವರವನ್ನು ದಾಖಲಿಸುವುದು.
- ಈಗಾಗಲೇ ಮೇಲ್ಕಂಡಂತೆ ಸರ್ಕಾರದ ಅನುಮತಿ ಪಡೆದ ಸ್ಥಳಾಂತರ ಮತ್ತು ಹಸ್ತಾಂತರ ಪ್ರಕರಣಗಳಿಗೆ ಸಂಬಂಧಿಸಿದಂತೆ ಭೌತಿಕವಾಗಿ ಕಡತ ನಿರ್ವಹಿಸಿ ಮೇಲೆ ಸೂಚಿಸಿದಂತೆ ಅನುಮೋದನೆ ನೀಡಿ ಪ್ರಮಾಣಪತ್ರಗಳನ್ನು ನೀಡುವುದು.
- ಪ್ರಸ್ತುತ ಆನ್‌ಲೈನ್ ತಂತ್ರಾಂಶ ಅಭಿವೃದ್ಧಿ ಕಾರ್ಯ ಚಾಲ್ತಿಯಲ್ಲಿದ್ದು ತದನಂತರದಲ್ಲಿ ಈ ಕಛೇರಿಯಿಂದ ನೀಡುವ ಸೂಚನೆಯಂತೆ ಆನ್‌ಲೈನ್ ತಂತ್ರಾಂಶದಲ್ಲಿ ಮಂಜೂರಾತಿಗೆ ಕ್ರಮವಹಿಸುವುದು.

ಒಂದು ವೇಳೆ ಸ್ಥಳಾಂತರ ಹಾಗೂ ಹಸ್ತಾಂತರಗೊಂಡ ಶಾಲೆಗಳಿಗೆ ಸರ್ಕಾರದ ಅನುಮತಿ ಆದೇಶದ ಷರತ್ತುಗಳನ್ವಯ ನಿಯಮಾನುಸಾರ ಕ್ರಮಕೈಗೊಳ್ಳದೇ ಇರುವುದು ಕಂಡು ಬಂದಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಸೇವಾ ನಿಯಮಾವಳಿ ಅನ್ವಯ ಅಗತ್ಯ ಶಿಸ್ತುಕ್ರಮ ಜರುಗಿಸಲಾಗುವುದು.

೨೦.೨೦.೦೯/೨೦೧೦

ಆಯುಕ್ತರು

ಶಾಲಾ ಶಿಕ್ಷಣ ಇಲಾಖೆ

ಬೆಂಗಳೂರು

ಇವರಿಗೆ

1.ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ

Scanned with OKEN Scanner